**SC No. 79/2021**
**PW.-5**

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

**ಎಸ್. ಸಿ. 79/2021**

| | | |
|---|---|---|
| ಸಾಕ್ಷಿದಾರರ ಹೆಸರು | ಕರಿಯಪ್ಪ | ಪ್ರಮಾಣ ವಚನ ಮಾಡಿದ |
| ತಂದೆಯ/ಗಂಡನ ಹೆಸರು | ದಾಸಯ್ಯ | ದಿನಾಂಕ: 20.11.2025 |
| ವಯಸ್ಸು | 77 ವರ್ಷ | |
| ವೃತ್ತಿ | ಏನು ಇಲ್ಲ | ಪ್ರಾ.ಸಾಃ 5 |
| ವಾಸ ಸ್ಥಳ | ಮೇಟಗಳ್ಳಿ ಮೈಸೂರು | ಚಾ.ಸಾಃ 12 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರಿಗೆ ಅಮಾನತ್ತು ಮಹಜರ್ ಅನ್ನು ತೋರಿಸಲಾಯಿತು ಸಾಕ್ಷಿದಾರರು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅಮಾನತ್ತು ಮಹಜರ್ ಅನ್ನು ನಿಪಿ–21 ಎಂದು, ಸಾಕ್ಷಿದಾರರ ಸಹಿಗಳನ್ನು ನಿಪಿ–21(ಎ) ಮತ್ತು 21(ಬಿ) ಎಂದು ಗುರುತಿಸಲಾಯಿತು. ಈಗ್ಗೆ 3 ವರ್ಷಗಳ ಹಿಂದೆ ಮೇಟಗಳ್ಳಿ ಪೊಲೀಸ್ ಠಾಣೆಗೆ ನನ್ನ ಕೆಲಸದ ನಿಮಿತ್ತ ಹೋಗಿದ್ದೆ ಆ ವೇಳೆಯಲ್ಲಿ ನನ್ನ ಸಹಿ ತೆಗೆದುಕೊಂಡಿದ್ದರು. ಆ ವೇಳೆಯಲ್ಲಿ ನನಗೆ ಯಾರನ್ನು ತೂರಿಸಿರಲಿಲ್ಲ ಮತ್ತು ಎಲ್ಲಿಗೂ ಕರೆದುಕೊಂಡು ಹೋಗಿರಲಿಲ್ಲ. ಮೇಟಗಳ್ಳಿ ಹತ್ತಿರ ಇರುವ BMC ನಗರದ ಹತ್ತಿರ ಇರುವ ಕಟ್ಟೆಗೆ ಡಿಪೋಕೆ ನನ್ನನ್ನು ಕರೆದುಕೊಂಡು ಹೋಗಿದ್ದರು ಅವರನ್ನು ಬಿಟ್ಟರೆ ಸುಮಾರು ಜನ

ನಿಂತಿದ್ದರು ಅವರು ಯಾರು ಯಾರು ಎಂದು ನನಗೆ ಗೊತ್ತಿರುವುದಿಲ್ಲ. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರು ಆ ದಿನ ಇದ್ದರೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಪೊಲೀಸರು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರನ್ನು ನನಗೆ ತೋರಿಸಿರಲಿಲ್ಲ. ಆರೋಪಿತರ ಹೇಳಿಕೆ ಮೇರೆಗೆ ನನ್ನನ್ನು ಎಲ್ಲಿಗೂ ಕರೆದುಕೊಂಡು ಹೋಗಿರಲಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರಲಿಲ್ಲ. ನಾನು ಈಗ ನೋಡುತ್ತಿರುವ ಫೋಟೋಗಳಲ್ಲಿ ನಾನು ಇರುತ್ತೇನೆ. ಆ ಫೋಟೋಗಳನ್ನು BMC ನಗರದ ಹತ್ತಿರ ಇರುವ ಕಟ್ಟಿಗೆ ಡಿಪೊ ಹತ್ತಿರ ತೆಗೆದಿದ್ದರು. ಸಾಕ್ಷಿದಾರರು ನೋಡಿ ಗುರುತಿಸಿದ 4 ಫೋಟೋಗಳನ್ನು ಕ್ರಮವಾಗಿ ನಿಪಿ-22 ರಿಂದ ನಿಪಿ-25 ಎಂದು ಗುರುತಿಸಲಾಯಿತು. ನಾನು ಈಗ ನೋಡುತ್ತಿರುವ ಸಹಿ ನನ್ನ ಸಹಿ ಇರುತ್ತದೆ. ಸಾಕ್ಷಿದಾರರು ನೋಡಿ ಗುರುತಿಸಿದ ಸಹಿ ಉಳ್ಳ ದಾಖಲೆಯನ್ನು ನಿಪಿ-26 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ-26(ಎ) ಎಂದು ಗುರುತಿಸಲಾಯಿತು. ಪೊಲೀಸರು ನನಗೆ ಯಾವುದೇ ನೋಟೀಸ್ ಕೊಟ್ಟಿರಲಿಲ್ಲ ಆದರೆ ಸಹಿ ತೆಗೆದುಕೊಂಡಿದ್ದರು. ನನಗೆ ತೂಕದ ಬಟ್ಟುಗಳು, ಮಚ್ಚುಗಳನ್ನು, ಕೊಡಲಿ ಮತ್ತು ಆಕ್ಸೆಲ್ ಬ್ಲೇಡ್ , ಕ್ಯಾಲ್ಕ್ಯುಲೇಟರ್ ಗಳನ್ನು ತೋರಿಸಿದರೆ ಗುರುತಿಸಲು ಆಗುವುದಿಲ್ಲ ಏಕೆಂದರೆ ಈ ಹಿಂದೆ ನಾನು ಅವುಗಳನ್ನು ನೋಡಿರುವುದಿಲ್ಲ.

**ಈ ಹಂತದಲ್ಲಿ , ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು**

ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ದಿನಾಂಕ 15.01.2021 ರಂದು ಮೇಟಗಳ್ಳಿ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್ ಪೆಕ್ಟರ್ ಅವರು ಸಿಬ್ಬಂದಿಯವ ಮೂಲಕ ನನ್ನನ್ನು ಠಾಣೆಗೆ ಕರೆಸಿ ಆರೋಪಿತರನ್ನು ತೋರಿಸಿ ಇವರುಗಳು RBI ಕ್ಯಾಂಪಸ್ ಒಳಗೆ ಇದ್ದಂತಹ ಗಂಧದ ಮರಗಳನ್ನು ಕಡಿದು ತುಂಡುಗಳನ್ನು ಮಾಡಿ ಮಕ್ಬುಲ್ ಶರೀಫ್ ರವರಿಗೆ ಮಾರಾಟ ಮಾಡಿರುತ್ತಾರೆ ಅವುಗಳನ್ನು ಅಮಾನತ್ತು ಪಡಿಸಿಕೊಳ್ಳಬೇಕಾಗಿರುತ್ತದೆ ಪಂಚರಾಗಿ ಇರಬೇಕೆಂದು ನನಗೆ ನೊಟೀಸ್ ಜಾರಿ ಮಾಡಿ ಹೇಳಿದ್ದರು ಎಂದರೆ ಸರಿಯಲ್ಲ. ಪೊಲೀಸರು ಆರೋಪಿತರು ಮತ್ತು ನಮ್ಮನ್ನು ಕರೆದುಕೊಂಡು ಸೆಂಟ್ ಫಿಲೋಮಿನಾ ಚರ್ಚ್ ಬಳಿ ಇರುವ ಪಾರ್ಕ್ ಬಳಿ ಹೋದಾಗ ಶರೀಫ್ ರವರ ಮನೆಯನ್ನು ತೋರಿಸಿ ತಾವು ಕಳ್ಳತನ ಮಾಡಿದ್ದ ಗಂಧದ ಮರದ ತುಂಡುಗಳನ್ನು ಇಲ್ಲಿಗೆ ತಂದು ಕೊಟ್ಟಿದ್ದೆವು ಎಂದು ಹೇಳಿ ಮಕ್ಬುಲ್ ಶರೀಫ್ ನ್ನು ನೋಡಿ ಗುರುತಿಸಿದ್ದು ಆತನ ಹೆಸರು ಮತ್ತು ವಿಳಾಸ ಕೇಳಲಾಗಿ ಹೆಸರು ವಿಳಾಸ ಹೇಳಿದ್ದ ಮತ್ತು ಶ್ರೀಗಂಧದ ತುಂಡುಗಳನ್ನು ಖರೀದಿ ಮಾಡಿರುವುದಾಗಿ ಒಪ್ಪಿಕೊಂಡು ತೂಕ ಮಾಡುವ ವಸ್ತುಗಳನ್ನು ಹಾಜರುಪಡಿಸಿದ್ದ ಅವುಗಳನ್ನು ಪೊಲೀಸರು ಅಮಾನತ್ತು ಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಪೊಲೀಸರು ನಿಪಿ-21 ರ ಪ್ರಕಾರ ನನ್ನ ಸಮಕ್ಷಮ ಪಂಚನಾಮೆಯನ್ನು

ಮಾಡಿ ತೂಕದ ಬಟ್ಟುಗಳು, ಮಚ್ಚುಗಳನ್ನು, ಕೊಡಲಿ ಮತ್ತು ಆಕ್ಸೆಲ್ ಬ್ಲೇಡ್ , ಕ್ಯಾಲ್ಕುಲೇಟರ್ ಅನ್ನು ಅಮಾನತ್ತು ಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು ಆರೋಪಿತರಿಗೆ ಅನುಕೂಲವಾಗಲಿ ಎನ್ನುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದ :**

**ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**